ತೋರಿಸಿಬಿಟ್ಟೆ. ಚಂದಮಾಮನನ್ನು ತೋರಿಸಲು ನಿನ್ನ ಕೈಯೇನು ಸೇದಿಹೋಗಿದೆಯಾ?'

ಅವಳ ನಗೆ ದೊಡ್ಡದಾಯಿತು. ನಾನು ಗರಬಡಿದಂತೆ ನಿಂತೆ. ಕಣ್ಣುಗಳು ಗಕ್ಕನೆ ಮುಚ್ಚಿಕೊಂಡವು. ಅವಳಿಂದ ಮತ್ತೊಂದು ಹೊಡೆತ ಬಂದು: 'ಹೆಣ್ಣು ಬೇಡ ಅಂದರೆ ಗಂಡನ್ನೇ ಯಾಕೆ ಮದುವೆಯಾಗಲಿಲ್ಲ ನೀನು? ಆಗಿದ್ದರೆ ಅವನು ನಿನಗೊಂದು ಗಂಡುಮಗನನ್ನು ಹೆತ್ತು ಕೊಡುತ್ತಿದ್ದನೇನೊ. ಅಥವಾ ಯಾರಿಗೆ ಗೊತ್ತು, ನೀನೇ ಹೆತ್ತುಕೊಳ್ಳುತ್ತಿದ್ದೆಯೇನೋ!'

ನನ್ನ ಕೈ ಮೇಲಿನ ಹಿಡಿತ ಥಕ್ಕನೆ ಸಡಿಲಾಯಿತು. ಫಕ್ಕನೆ ಕಣ್ಣು ತೆರೆದೆ.

ಅವಳಿರಲಿಲ್ಲ. ನಾಯಿ ನನ್ನನ್ನೇ ನೋಡುತ್ತಾ ನಿಂತಿತ್ತು. ಅದು ನಗುತ್ತಿರುವಂತಿತ್ತು. ಹತಾಶೆಯಲ್ಲಿ ತಲೆಯೆತ್ತಿದೆ. ಆ ಬಂಡೆ ಕಂಡಿತು.

ಅದೊಂದು ಬೃಹದಾಕಾರವಾದ ಬಂಡೆ. ನೂರು ನೂರಿಪ್ಪತ್ತು ಅಡಿಗಳೆತ್ತರಕ್ಕೆ, ನಲವತ್ತು ಎಪ್ಪತ್ತು ಡಿಗ್ರಿ ಕೋನದಲ್ಲಿ ಏರಿಹೋಗಿತ್ತು. ದಾರಿ ಅಲ್ಲಿ ತುಸು ಪಕ್ಕಕ್ಕೆ ಹೊರಳಿ ಅದನ್ನು ಸವರಿಕೊಂಡು ಮುಂದುವರೆದಿತ್ತು. ಮಡದಿ ಲಲಿತೆ ತವರಿಗೆ ಹೋದಾಗಿನಿಂದ ನಾನು ಬೆಳಗಿನ ವಾಕಿಂಗ್‌ಗೆ ಹಿಡಿಯುವುದೇ ಈ ಜನವಿರಳ ದಾರಿಯನ್ನು. ಮೊದಲ ಸಲ ಈ ಬಂಡೆಯವರೆಗೆ ಬಂದಾಗ, ಇಷ್ಟು ಸಾಕು ಎಂದು ಹಿಂದಕ್ಕೆ ತಿರುಗಿದೆ. ವಾರವಿಡೀ ಹಾಗೇ ಮಾಡಿದೆ. ಆಗಿನಿಂದ ಇಲ್ಲಿಗೆ ಬಂದಾಗ ನನ್ನ ಹೆಜ್ಜೆಗಳು ತಂತಾನೇ ಹಿಂದೆ ತಿರುಗಿಬಿಡುತ್ತವೆ. ಮಸ್ಲ್ ಮೆಮೊರಿಯಿಂದ ಹಾಗಾಗುತ್ತದೆ ಎಂದು ಲಲಿತೆ ನಿನ್ನೆ ಬೆಳಿಗ್ಗೆ ಫೋನ್‌ನಲ್ಲಿ ಹೇಳಿದ್ದಳು. ಅವಳೊಬ್ಬಳು ಕಥೆಗಾರ್ತಿ. ಆಗಾಗ ಕವನಗಳನ್ನೂ ಬರೆಯುತ್ತಾಳೆ.

ಏಕಾಏಕಿ ಎದುರಾಗಿ ಏನೇನೋ ಒದಗಿ ಎತ್ತಲೋ ಮರೆಯಾದ ಹೆಣ್ಣು ಸುತ್ತಲೂ ಕಟ್ಟಿಹೋಗಿದ್ದ ಪ್ರಶ್ನೆಗಳ ಹುತ್ತದಿಂದ ಹೊರಬರಲು ಹೆಣಗುತ್ತಾ ಆ ಬಂದೆಯತ್ತ ಶೂನ್ಯದೃಷ್ಟಿ ಹೂಡಿ ನಿಂತೆ. ಕಾಲಿಗೇನೋ ಸೋಕಿಂತಾಗಿ ಬೆಚ್ಚಿ ಒಂದು ಹೆಜ್ಜೆ ಮುಂದೆ ಜಿಗಿದೆ. ಸಾವರಿಸಿಕೊಂಡು ತಿರುಗಿನೋಡಿದರೆ ಕಂಡದ್ದು ಬಂಡೆಯ ಎತ್ತರವನ್ನು ಅಳೆಯುವಂತೆ ತಲೆಯನ್ನು ಮೇಲೆತ್ತಿ ನೋಡುತ್ತಾ ನಿಂತ ನಾಯಿ!

ನನಗದು ಮರೆತೇಹೋಗಿತ್ತು. ಆ ಹೆಂಗಸು ಮರೆಸಿಬಿಟ್ಟಿದ್ದಳು. ಈಗ ನೋಡಿದೆ, ಹತ್ತಿರ ಬಂದು ನನ್ನ ಕಾಲಿಗೆ ಮೂತಿ ಸೋಕಿಸಿದೆ! ನನಗೆ ಹೇಗೆಹೇಗೋ ಅನಿಸಿಬಿಟ್ಟಿತು. ಎರಡು ಹೆಜ್ಜೆ ದೂರ ಹೋಗಿ ನಿಂತೆ. ಬಂಡೆ ಎರಡು ಹೆಜ್ಜೆ ಹತ್ತಿರಾಗಿತ್ತು. ನಾಯಿ ಹಟ ತೊಟ್ಟಂತೆ ನನ್ನ ಬಳಿ ಓಡಿಬಂದು ಕಾಲಿಗೆ ಮೂತಿ ಉಜ್ಜಿಯೇಬಿಟ್ಟಿತು. ನಾನು ಈ ಸಲ ನಾಲ್ಕು ಹೆಜ್ಜೆ ಮುಂದೆ ಹಾರಿದೆ. ಬಂಡೆಯ ಬುಡದಲ್ಲಿ ನಿಂತಿದ್ದೆ!

ಶಿವನೇ ಶಂಭುಲಿಂಗಾ! ಇದೇನು ನಡೆಯುತ್ತಿದೆ? ನನ್ನ ಚಿಂತೆಯಲ್ಲಿ ನಾನಿದ್ದೇನೆ, ಇದು ತನ್ನದೇನೋ ಲೆಕ್ಕದಲ್ಲಿ ಇದೇ ದಾರಿ ಹಿಡಿದಿದೆ, ಈ ದಾರಿಯೇನು ನನ್ನೊಬ್ಬನದಾ ಅಂದುಕೊಂಡು ಓಡಿಸದೇ ಬಿಟ್ಟಿದ್ದಕ್ಕೆ ಈಗ ಇಷ್ಟು ಸಲಿಗೆ ತೋರುತ್ತಿದೆ!

ಅದನ್ನೇ ದುರುಗುಟ್ಟಿಕೊಂಡು ನೋಡಿದೆ. ಅದು ಬಾಲ ಅಲ್ಲಾಡಿಸಿಕೊಂಡು, ನಗುವಂತೆ ಬಾಯಿ ತೆರೆದುಕೊಂಡು ನನ್ನನ್ನೇ ನೋಡಿತು. ಇದೆಂಥಾ ಸಂಬಂಧ? ಇದ್ಯಾವ ಜನ್ಮದ ನಂಟು? ಗೊಂದಲದಲ್ಲಿ ಕಣ್ಣುಗಳನ್ನು ಬಂಡೆಯತ್ತ ಹೊರಳಿಸಿದೆ. ಅದೆಷ್ಟೋ ಹೊತ್ತಿನ ಮೇಲೆ ಕಣ್ಣುಗಳು ಸೋತಂತೆ ಕೆಳಗಿಳಿದವು, ಬಂಡೆಯ ಬುಡಕ್ಕೆ ಬಂದು ನಿಂತವು. ತುಂಬೆ ಗಿಡಗಳ ಹಿಂದೆ ಏನೋ ಅರೆಬರೆ ಅಕ್ಷರಗಳಂತೆ ಕಂಡವು.

ಇಂತಹ ಬಂಡೆಗಳನ್ನು ಕಂಡರೆ ಜನರ ಕೈಗೆ ತುರಿಕೆ ಹತ್ತುತ್ತದೆ. ಸಿಕ್ಕಿದ ಕಲ್ಲು ಚೂರು ಎತ್ತಿಕೊಂಡು ತಮ್ಮ ಹೆಸರು ಕೆತ್ತುತ್ತಾರೆ. ಇದಕ್ಕೆ ದೊಡ್ಡದೊಡ್ಡವರೂ ಹೊರತಲ್ಲ. ಈ ಬಂಡೆಯ ಮೇಲೂ ಅಲ್ಲಲ್ಲಿ ಹೆಸರುಗಳು ಕಾಣುತ್ತಿವೆ. ಕೆಲವು ಹೆಸರುಗಳು ಜೋಡಿಯಾಗಿವೆ. ಲಲಿತೆಯೇನಾದರೂ ಇತ್ತ ಬಂದರೆ ಖಂಡಿತಾ ಚಿಕ್ಕದಾಗಿಯಾದರೂ ತನ್ನ ಹೆಸರು ಕೆತ್ತುತ್ತಾಳೆ. ತಾನು ಜನಪ್ರಿಯ ಕಥೆಗಾರ್ತಿ ಎಂದವಳಿಗೆ ಗೊತ್ತಿದೆ. ಏನಾದರೂ ಕೆತ್ತಿಕೊಳ್ಳಲಿ. ನನಗೇನೂ ಸಂಬಂಧವಿಲ್ಲ ಅನ್ನುವ ಹಾಗೆ ನಾನು ದೂರ ನಿಲ್ಲುತ್ತೇನೆ.

ಹಾಂ! ನನಗೇನೂ ಸಂಬಂಧವಿಲ್ಲವೇ? ಅವಳು ಎಲ್ಲಿ ತನ್ನ ಹೆಸರು ಬರೆದರೂ ಅಲ್ಲಿ ನನ್ನ ಹೆಸರೂ ಇರುತ್ತದಲ್ಲ! ತಿಂಗಳಿಗೆ ಕನಿಷ್ಠ ಒಂದಾದರೂ ನಿಯತಕಾಲಿಕದಲ್ಲಿ ಅವಳ ಹೆಸರಿನೊಂದಿಗೆ ನನ್ನ ಹೆಸರು ಕೂಡಿಕೊಂಡು ರಾರಾಜಿಸುತ್ತದಲ್ಲ! ಅದೇನು ಹೇಳುತ್ತದೆ? ಈ ಬಂಡೆಯ ಮೇಲೆ ಅವಳ ಹೆಸರು ಮೂಡಿದರೆ ಅಲ್ಲಿ ನನ್ನ ಹೆಸರೂ ದಾರಿಹೋಕರ ಕಣ್ಣು ಕುಕ್ಕುವುದು ಶತಸಿದ್ಧ ಎಂದಲ್ಲವೇ!

ಹೆಣ್ಣಿನ ಹೆಸರಿನೊಂದಿಗೆ ನನ್ನ ಹೆಸರು ಒಂದಾಗಿರುವುದನ್ನು ಇದುವರೆಗೆ ನಾನು ಗಮನಿಸಲೇ ಇಲ್ಲವಲ್ಲ! ಈಗ ತಟ್ಟಿದ ಅರಿವು ಏನು ಹೇಳುತ್ತಿದೆ? ಏನು ಕಲಿಸುತ್ತಿದೆ? ಇದೆಲ್ಲಾ ಇಂದೇ ಆಗುತ್ತಿರುವುದು ಹೇಗೆ? ಆ ಹೆಂಗಸಿನ ಪ್ರಭಾವವೇ? ಅವಳೇನಾದರೂ ಇನ್ನೂ ಇಲ್ಲೆಲ್ಲಾದರೂ ಇದ್ದಾಳೆಯೇ?

ಗಡಬಡಿಸಿ ಸುತ್ತಲೂ ಕಣ್ಣೋಡಿಸಿದೆ. ಊಹ್ಞುಂ, ಅವಳು ಕಾಣುತ್ತಿಲ್ಲ. ಕಂಡದ್ದು ತುಂಬೆ ಗಿಡಗಳ ಹಿಂದಿನ ಅದೇ ಅರೆಬರೆ ಅಕ್ಷರಗಳು.

ಜನ ಹಾಗೆ ಹೆಸರು ಕೆತ್ತುವುದು ಎತ್ತರದಲ್ಲಿ, ಜನರಿಗೆ ಕಾಣುವಂತೆ. ಬಂಡೆಯ ಬುಡದಲ್ಲಿ, ಗಿಡಗಳ ಮರೆಯಲ್ಲಿ ಯಾವೂ ತಮ್ಮ ಹೆಸರನ್ನು ಅಡಗಿಸಿಡುವುದಿಲ್ಲ. ಅಡಗಿಸುವುದಾದರೆ ಕಷ್ಟಪಟ್ಟು ಕೆತ್ತುವ ಅಗತ್ಯವೂ ಇರುವುದಿಲ್ಲ.



ಅಚ್ಚರಿಯ ಜತೆ ನನಗೆ ಕುತೂಹಲ. ಹಿಂದೆಯೇ ಏನೋ ಆಸೆ. ಸ್ವಲ್ಪ ಹೊತ್ತಾದರೂ ಚಿಂತೆಯನ್ನು ಪಕ್ಕಕ್ಕಿರಿಸಲು ಈ ಬಗೆಯ ಕುತೂಹಲ ನನಗೆ ಸಹಾಯಕವಾಗುತ್ತದೆ.

ಕೆಳಗೆ ಬಾಗಿ ಗಿಡಗಳನ್ನು ಸರಿಸಿದೆ. ಹೌದು, ಅಲ್ಲಿ ಅಕ್ಷರಗಳಿದ್ದವು, ಅವು ಶಾಲೆಯ ಇತಿಹಾಸ ಪಠ್ಯಪುಸ್ತಕದಲ್ಲಿ ಕಂಡಿದ್ದಂತಹ ಪುರಾತನ ಶಿಲಾಲೇಖದಂತಿದ್ದವು. ನನಗೆ ಇನ್ನಷ್ಟು ಕುತೂಹಲ. ಇದು ಅಶೋಕನ ಬೌದ್ಧಧರ್ಮ ಸಾರುವ ಶಿಲಾಶಾಸನವೇ?

ಹಾಗೇ ಇದ್ದರೆ ಇದರ ಶೋಧನೆ ಈಗ ನನ್ನಿಂದ! ನನ್ನ ಹೆಸರು ಇತಿಹಾಸ ಪಠ್ಯಪುಸ್ತಕಗಳಲ್ಲಿ ದಾಖಲಾಗುವ ಸಮಯ ಇದಾಗಿದೆಯೇ. ಹಾಗಾದರೆ ನನ್ನ ಹೆಸರು ಸ್ವತಂತ್ರವಾಗಿ ಎಲ್ಲೆಡೆ ಕಾಣುತ್ತದೆ. ಹೆಣ್ಣಿನ ಹೆಸರಿನ ಬಾಲಂಗೋಚಿಯಾಗಲ್ಲ!

ಒಮ್ಮೆ ಶರೀರವಿಡೀ ಜುಮ್ಮೆಂದಿತು. ಎಡಬಲ ನೋಡಿದೆ. ದಾರಿ ಕಾಣುವಷ್ಟು ದೂರಕ್ಕೂ ಒಂದು ನರಪಿಳ್ಳೆಯೂ ಇಲ್ಲ! ಅತ್ತಲಿನ ಕೆರೆಯಾಚೆಯ ದೂರದ ಟಾರ್ ರಸ್ತೆಯಲ್ಲಿ ನಡೆದಾಡುತ್ತಿರುವ ಜನರಿಗೆ ನಾನು ಗುರುತಾಗುವಷ್ಟು ಕಾಣುವುದಿಲ್ಲ. ಆ ಹೆಂಗಸಂತೂ ಅದೆಲ್ಲಿ ಹಾಳಾಗಿಹೋದಳೋ, ಇಲ್ಲಂತೂ ಇಲ್ಲ.

ಕುಕ್ಕರಗಾಲಿನಲ್ಲಿ ಕೂತು ತುಂಬೆ ಗಿಡಗಳನ್ನು ಆತುರಾತುರವಾಗಿ ಅತ್ತಿತ್ತ ಬಾಗಿಸಿ ಶಿಲಾಲೇಖದ ಮೇಲೆ ಕಣ್ಣು ನೆಟ್ಟೆ. ಗುರುತಿಗೆ ಹತ್ತಿದ ಕೆಲವು ಅಕ್ಷರಗಳು ಕನ್ನಡದವು! ತುಸು ನಿರಾಸೆಗೊಳಗಾದೆ. ಇವು ಅಶೋಕನ ಶಿಲಾಲೇಖವಾಗಿರುವ ಸಾಧ್ಯತೆ ಇಲ್ಲ! ಆದರೆ ಅವು ಕೊರೆಯಲ್ಪಟ್ಟ ವಿನ್ಯಾಸ ಅತಿ ಪ್ರಾಚೀನವೆನ್ನುವುದಂತೂ ನಿಜ. ಅದರರ್ಥ ನನ್ನ ಹೆಸರು, ನನ್ನದೇ ಹೆಸರು, ಕೊನೇಪಕ್ಷ ರಾಜ್ಯಾದ್ಯಂತ ಜನರ ಕಣ್ಣಿಗೆ ಬೀಳುವುದೂ ನಿಜ.

ಆಳವಾಗಿ ಕೊರೆದಿದ್ದ ಶಿಲಾಲೇಖದ ಬಹುಭಾಗ ಒಣಗಿಹೋದ ಕೆಂಪುಮಣ್ಣಿನಲ್ಲಿ ಮುಚ್ಚಿಹೋಗಿತ್ತು. ಅಲ್ಲೇ ಸಿಕ್ಕಿದ ಒಣ ಕಡ್ಡಿಯೊಂದನ್ನು ನಿಧಾನವಾಗಿ ಸರಿದಾಡಿಸಿ ಮಣ್ಣುಹಕ್ಕಳೆಗಳನ್ನು ಉದುರಿಸಿದೆ. ಮೂರು ಸಾಲುಗಳಲ್ಲಿದ್ದ ಎಲ್ಲ ಅಕ್ಷರಗಳೂ ಅನಾವರಣಗೊಂಡವು. ಓದಲು ಹೋದೆ. ಬೆನ್ನ ಹಿಂದೇನೋ ಸದ್ದಾಯಿತು. ಕೂತಂತೇ ತಿರುಗಿದೆ. ಜಾಗಿಂಗ್ ಉಡುಪಿನಲ್ಲಿದ್ದ ನಡುವಯಸ್ಕನೊಬ್ಬ ಆ ಅಕ್ಷರಗಳ ಮೇಲೇ ಕಣ್ಣಿಟ್ಟಿದ್ದ. ಅವು ಚೆನ್ನಾಗಿ ಕಾಣುವಷ್ಟು ನಾನು ಮಣ್ಣು ಕೊಳೆ ತೆಗೆದ ಕೂಡಲೇ ಇದೆಲ್ಲಿಂದ ವಕ್ಕರಿಸಿದ ಇವನು! ನನ್ನ ಕೀರ್ತಿಯಲ್ಲಿ ಪಾಲು ಕದಿಯುವ ಕಳ್ಳ! 'ಅದೇನು ನೋಡ್ತಿದೀರಿ ಸಾರ್?' ಅಂದ.

ಕಣ್ಣೆದುರೇ ಇರುವುದರ ಬಗ್ಗೆ ಸುಳ್ಳು ಹೇಳಲಾಗದು. 'ಆ ಪುರಾತನ ಶಿಲಾಲೇಖ ಓದೋಕೆ ಟ್ರೈ ಮಾಡ್ತಿದೀನಿ' ಅಂದೆ. 'ಹಾಂ' ಅಂದ ಅವನು. ನನಗೆ ನಗು ಬಂತು. ತಲೆ ಕೆಳಗೆ ಹಾಕಿ ತಡೆದುಕೊಂಡೆ. ಎರಡು ಮೂರು ಕ್ಷಣಗಳ ನಂತರ ಅವನ ದನಿ ದೂರದಿಂದ ಬಂತು. ಅದು 'ಸಪಾಟು ಬಂಡೆ ನೋಡ್ಕೊಂಡು ಅಲ್ಲೇನೋ